Regd No M 1299 Sri ಶಾ 15—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಉಡ್‌ಲಾಂಡ್

ಶಿ ನ

ಜನಪ್ರಿಯ 2 ನೇ ವಾರ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಿರೂಪ ರಾಯ್, ತ್ರಿಲೋಕ್ ಕಪೂರ್

ಪ್ರತಿ ದಿನ 3 ಪ್ರದರ್ಶನಗಳು

ಮೋತಿಲಾಲ್

ಜಯಪ್ರದ 2 ನೆ ವಾರ

ನಿಮ್ಮ, ಶೇಖರ್, ಸುಲೋಚನ ಚಟರ್ಜಿ

ಪಾತ್ರವಹಿಸಿರುವ

ಬಡೀ ಬಹು

ಅಮೋಘ ಹಿಂದಿ ಚಿತ್ರ ದಿನ 3 ಆಟಗಳು

ರಣಜಿತ್

ಕೀರ್ತಿಯುತ 3 ನೇ ವಾರ

ಶ ಬಿ ಸ್ತಾ ನ್

ಮನಮೋಹನ ಹಿಂದಿ ಚಿತ್ರ

ಪಾತ್ರ: ಶಾಂ, ನಸೀಂ, ಸಪ್ರು, ಕಕ್ಕೂ

ಪ್ರತಿ ದಿನ 3 ಆಟಗಳು

ದಿವ್ಯ ವಾಣಿ

ವಾರ್ಧಿನಿಗೆ ತನ್ನನ್ನು ಗೌರವಿಸುವ
ಕಡುಮೂರ್ಖನೂ ದೊರೆಯುತ್ತಾನೆ
— ಬೋಯಿಲು

ಚುನಾವಣೆಗೆ

ಶ್ರೀಮತಿ ಪಂಡಿತ್

ನವದೆಹಲಿ : ಅಮೇರಿಕೆಯಲ್ಲಿ ನಮ್ಮ ರಾಯಭಾರಿಗಳಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಉತ್ತರ ಪ್ರದೇಶದಿಂದ ಪಾರ್ಲಿಮೆಂಟ ಚುನಾವಣೆಗೆ ನಿಲ್ಲಲಿರುವರೆಂಬ ವಾರ್ತೆಯು ಪಾರ್ಲಿಮೆಂಟ ಅಲಾಪಿ ವರ್ಗಗಳಲ್ಲಿ ಅತ್ಯಂತ ಉತ್ಸುಕತೆಯನ್ನು ಕೆರಳಿಸಿದೆ. ಈ ಮೊದಲು ಅವರು ರಾಯಭಾರಿ ಪದವಿಯನ್ನು ಬಿಟ್ಟು ಕೊಡುವದಿಲ್ಲವೆಂದು ವದಂತಿಗಳಿದ್ದುದರಿಂದ ಈ ಸುದ್ದಿಯು ಹೆಚ್ಚು ಆಶ್ಚರ್ಯವನ್ನುಂಟು ಮಾಡಿದೆ

ಅಪೇರ—

ಅಮೋಘ 3 ನೇ ವಾರ

ನವಾರ್ಧಿಕಾರಿ

ಮಹೋನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ,
ರಾಮಚಂದ್ರ್, ಸಂಬಿಯಾರ್

ಪ್ರತಿ ದಿನ 3 ಆಟಗಳು

ಈಗ ಯಶಸ್ವಿಯಾಗಿ ನಡಿಯುತ್ತಿದೆ — ಪ್ರತಿ ದಿನ 3 ಆಟಗಳು

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಟದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಬಿ. ಆರ್. ಸ್ಯಾಂಡೋ, ಕಲಾವಿಶಾರದ ಕೊಟ್ಟಾರಪ್ಪ

— SUKH SAMPATH CHITRAPAT Release

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore

ಎಂಗೆ ವಿವಾದ – ಭಾರತದ ಓಟು

ಪರ್ಷಿಯ ಎಣ್ಣೆ ವಿವಾದದ ಬಗೆಗೆ ವಾದವಿವಾದಗಳನ್ನೆಲ್ಲ ಕೇಳಿ ಯಾರಿಗೆ ಓಟು ಕೊಡಬೇಕೆಂಬುದನ್ನು ನಿಮ್ಮ ವಿವೇಚನೆಗೆ ಬಿಡಲಾಗಿದೆ ಎಂದು ಭಾರತ ಸರ್ಕಾರ ವಿಶ್ವಸಂಸ್ಥೆಯ ತನ್ನ ಪ್ರತಿನಿಧಿ ಸರ್ ಬಿ ಎನ್ ರಾವರಿಗೆ ತಿಳಿಸಿರುವದಾಗಿ ವಿಶ್ವಸಂಸ್ಥೆ ವಾರ್ತೆ

ಮೈಸೂರು ರೇಸಸ್

ನಿನ್ನೆಯ ಫಲಿತಾಂಶ

1 ಶಿವಾಜಿ ಪ್ಲೇಟ್ (ಡಿ 1)

ಪುಷ್ಪ. ಗೋಲ್ಡ್ ಬಾಯ್. ಟೋಟು — ವಿನ್ ರೂ 6 ವರೆ. ಪ್ಲೇಸ್ ರೂ. 5, ರೂ 5 ವರೆ.

2 ಶಿವಾಜಿ ಪ್ಲೇಟ್ (ಡಿ 2)

ಪಾಮೀರ್. ಮೈ ಬೇಬಿ, ಜಾಕ್ ವಡ್.

ಟೋಟು — ವಿನ್ ರೂ 10. ಪ್ಲೇಸ್ ರೂ. 7 ವರೆ ರೂ 14 ವರೆ, 18 ವರೆ

3 ಸಿಟಿ ಪ್ಲೇಟ್ (ಡಿ 2)

ರೆವಲ್ರಿ, ವೈಚಾನ್ಸ್, ಗೋಲ್ಡ್ ಮೆಮರಿ.

ಟೋಟು — ವಿನ್ ರೂ. 37. ಪ್ಲೇಸ್ ರೂ. 14 ವರೆ, 13 ವರೆ, 13

4 ಸಿಟಿ ಪ್ಲೇಟ್ (ಡಿ 1)

4 ಸ್ಟ್ ಬಸ್ಟ್, ರಾಯಲ್‌ಬ್ಲೆಸಿಂಗ್ ಕ್ರಿಸ್ಸಿ ಡಾರ್ಲಿಂಗ್.

ಟೋಟು — ವಿನ್ ರೂ 13 ವರೆ. ಪ್ಲೇಸ್ ರೂ 7 ವರೆ, 9, 16 ವರೆ.

5 ಮಹಾರಾಜಾಸ್ ಗೋಲ್ಡ್ ಕಪ್

ಆ್ಯಂಟಿಸಿಡೆಸ್, ಹಾಮಕ್, ಬಿಗ್ ಐಡಿಯ.

ಟೋಟು — ವಿನ್ ರೂ 24, ಪ್ಲೇಸ್ ರೂ 6, 5 ವರೆ, 7 ವರೆ.

6 ಸ್ಪೀವರ್ಡ್ ಕಪ್

ನೇಚರ್ ಬಾಯ್, ಲೇಡಿ ಕ್ಲಿಯೋ ಪಾತ್ರ, ರೆಡ್ ಲೇಬಲ್

ಟೋಟು — ವಿನ್ ರೂ 63, ಪ್ಲೇಸ್ ರೂ. 13, 6 ವರೆ, 6 ವರೆ.

7 ಬೃಂದಾವನ ಪ್ಲೇಟ್

ಮಾರ್ಟನ್ ಡೈಸಿ, ಬಿಲ್ಲಿ ಅಮಿ, ಜಾಡೂಗಾರ್.

ಟೋಟು — ವಿನ್ ರೂ 22, ಪ್ಲೇಸ ರೂ 8, 7 ವರೆ, 18 ವರೆ

ಟ್ರಬಿಲ್ ಈವೆಂಟಿಗೆ ವಸೂಲಾದ ರೂ 4014 ಯಾವ ಟಿಕೆಟ್ ಗೆಲ್ಲಶಿಲ್ಲವಾದ್ದರಿಂದ ಈ ಹಣವನ್ನು ಮುಂದಕ್ಕೆ ಹಾಕಲಾಯಿತು

× ವಿಜಾಪುರ — 18 ನೇ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನವು ಈ ತಿಂಗಳು 21 – 22 ರಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಕೋಟ್ಯಾಧೀಶನ ಬಂಧನ

ಅಂಬಾಲಾದ ದೊಡ್ಡ ಕೋಟ್ಯಾಧೀಶ ಇಂಪೀರಿಯಲ್ ಫ್ಲೋರ್ ಮಿಲ್ಲಿನ ಮೇನೇಜಿಂಗ್ ಡೈರೆಕ್ಟರೂ ಆದ ಸೇಠ ವೈಕುಂಠನಾಥರನ್ನು ಪೋಲೀಸರು ಬಂಧಿಸಿ ಈಗ ಅವರನ್ನು ಪ್ರತಿಬಂಧಕ ಸ್ಥಾನಬದ್ಧತಾ ಕಾನೂನಿನ್ವಯ ಎರಡು ತಿಂಗಳವರಿಗೆ ಸ್ಥಾನಬದ್ಧತೆಯಲ್ಲಿರಿಸಲಾಗಿದೆ ಸೇಠ ವೈಕುಂಠನಾಥರ ವಿರುದ್ಧ ಇದ್ದ ಕಳ್ಳಸೇಟಿ ಕಳ್ಳ ಸಂಗ್ರಹ ಮತ್ತು ಲಾಭಡಕುತನ ಮೊದಲಾದ ಆರೋಪಗಳ ಬಗೆಗೆ ಕಳೆದ ಕೆಲ ದಿನಗಳಿಂದ ವಿಚಾರಣೆ ನಡೆದಿತ್ತು.

ಮಹಾ ಚುನಾವಣೆ

ಮಹಾ ಚುನಾವಣೆಯು ಬೆಂಗಳೂರು, ಮೈಸೂರು ನಗರಗಳಲ್ಲೂ, ಕ. ಜಿ. ಎಫ್. ನಲ್ಲೂ ಮುಂದಿನ ವರ್ಷ 2 ರಿಂದ 4 ನೇ ತಾ|| ವರಿಗೆ ನಡೆಯುವದೆಂದೂ, ಸಂಸ್ಥಾನದ ಇತರ ಕಡೆಗಳಲ್ಲಿ ತಾ|| 4 ರಿಂದ ಪ್ರಾರಂಭವಾಗಿ 20 ದಿವಸಗಳ ವರಿಗೆ ನಡೆಯುವದೆಂದೂ ತಿಳಿದು ಬಂದಿದೆ

ಮುರಾರ್ಜಿ ಮೇಲೆ ಆರೋಪ

ಬೊಂಬಾಯಿ — ಈ ಪ್ರಾಂತ್ಯದ ಒಳಾಡಳಿತ ಮಂತ್ರಿ ಮುರಾರ್ಜಿ ದೇಸಾಯರು ಕಾಂಗ್ರೆಸ್ಸಿನ ಖಜಾಂಚಿಯಾಗಿ ಹಣ ದುರುಪಯೋಗ ಮಾಡಿರುವರೆಂದೂ ತಂತಿ ಮೂಲಕ ವಾರಂಟು ಕಳುಹಿಸಬೇಕೆಂದೂ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ರಾವನಿಕ್ ಲಾಲಾ ಕೇಸ್ವಾನಿ ಮೊಕದ್ದಮೆ ಹೂಡಿದ್ದಾರೆ.

ಬಂಗಾರುಪೇಟೆ — ಈ ತಾಲ್ಲೂಕು ಕೊಪ್ಪನಹಳ್ಳಿ ರೆವಿನ್ಯೂ ಇನ್‌ಸ್ಪೆಕ್ಟರನ್ನು ವೆಂಕಟಪ್ಪ ಎಂಬವನು ಹೊಡೆದ ನೆಂಬ ಅಪವಾದನೆಗಾಗಿ ರೂ. 10 ಜುಲ್ಮಾನೆ ವಿಧಿಸಲ್ಪಟ್ಟಿತು.

ಲಾಹೋರು — ಪಾಕಿಸ್ತಾನದ ಪಂಜಾಬು ಸರ್ಕಾರದ ಸೆಕ್ರೆಟರಿಯೇಟ್ ಎನಹ ಮಿಕ್ಕ ಎಲ್ಲ ಇಲಾಖೆಗಳಲ್ಲೂ ಇಂಗ್ಲೀಷಿನ ಬದಲು ಉರ್ದು ಜಾರಿಗೆ ಬಂದಿರುತ್ತದೆ.

ಮೈಸೂರು — ಸಂಸ್ಥಾನದಲ್ಲಿ ನೊಂದ ಪ್ರದೇಶಗಳಿಗೆ ನೆರವು ನೀಡಲು ಸರಕಾರ ಹತ್ತು ಲಕ್ಷ ರೂ ವಂಜೂರಾಗಿದೆ.

ಸಂವುಟ ೧೦ ಸಂಚಿಕೆ ೮ ॥ ಶ್ರೀ ॥ ತಾ॥ 15-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಶ್ರೀ ಚಂದ್ರಮೌಳೀಶ್ವರ ಮಹೋತ್ಸವ

ಡಾಕೋರ್ ಅ 8— ಶ್ರೀ ಚಂದ್ರಮೌಳೀಶ್ವರ ಮಹೋತ್ಸವವು ನಿನ್ನೆ ಅತ್ಯಂತ ನಿರ್ಜೃಂಭಣೆಯಿಂದ ಪ್ರಾರಂಭವಾಯಿತು: ಯಜ್ಞಮಂಟಪವೂ ಸಭಾಮಂಟಪವೂ ಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದವು; ಪ್ರಾತಃಕಾಲದಲ್ಲಿ ಬಾಹ್ಮಣರು ವೇದಮಂತ್ರಗಳನ್ನು ಪಠಿಸಲು ಪ್ರಾರಂಭಿಸಿದರು; ಸಮಾರಂಭದಲ್ಲಿ ಭಾಗವಹಿಸಲು ಭಾರತದ ಮಹಾ ಸಂತರಾದ ಶ್ರೀ ಸ್ವಾಮಿ ಕರಪಾತ್ರಜೀಯವರು ಮಧ್ಯಾಹ್ನ ಆಗಮಿಸಿದರು. ಮತ್ತು ಸಾರ್ವಜನಿಕರಿಂದ ಅಭೂತಪೂರ್ವವಾಗಿ ಸ್ವಾಗತಿಸಲ್ಪಟ್ಟರು. ಸಾಯಂಕಾಲ ಪ್ರಚಂಡ ಸಭೆಯು ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ರಾಮನಾಥ ವಕೀಲರು ಚಿಕ್ಕದಾದ ಸುಮಧುರ ಸ್ವಾಗತ ಭಾಷಣಮಾಡಿ, ಅದನ್ನು ಡಾಕೋರು ಮಹಾಜನರ ಪರವಾಗಿ ಶ್ರೀ ದಯಾಭ್ಯಾರವರು ಸಮರ್ಥಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸ್ವಾಮಿಗಳವರು ಸ್ವಾಮಿ ಕರಪಾತ್ರಜೀಯವರ ವಿಷಯವಾಗಿ ಆಂದವಾದ ಭಾಷಣ ಮಾಡಿದರು. ಶ್ರೀ ಜಗದ್ಗುರುಗಳು ಹೇಗೆ ಸರಕಾರದ ನೀತಿಯಿಂದ ಸಾರ್ವಜನಿಕರು ಎಲ್ಲ ವಿಷಯಗಳಲ್ಲಿಯೂ ಪೀಡಿಸಲ್ಪಡುತ್ತಿರುವದೆಂಬುದನ್ನೂ ಇದನ್ನು ತಪ್ಪಿಸಿ, ಭಾರತೀಯ ಸಂಸ್ಕೃತಿಯನ್ನು ಕಾಪಾಡುವ ಸಲುವಾಗಿ ರಾಮರಾಜ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿರುವ ವಿಷಯವನ್ನು, ಮತ್ತು ಡೆಲ್ಲಿಯಲ್ಲಿ ಹೇಗೆ ಸತ್ಯಾಗ್ರಹ ನಡೆಯುತ್ತಿತ್ತುವುದೆಂಬುದನ್ನು, ಸತ್ಯಾಗ್ರಹಿಗಳು ಎಂತಹ ಅನುಚಿತ ಉಪಚಾರಕ್ಕೊಳಗಾಗಿರುವರೆಂಬುದನ್ನು ತಾವು ಜೇಕಾದರೆ ಮಂತ್ರಿಗಳಿಗೆ ಹಿಂದೂಕೋಡು ಹೇಗೆ ಭಾರತೀಯ ಸಂಸ್ಕೃತಿಯು ಒಡಕ್ಕೆ ಕೊಡಲಿ ಪ್ರಾಯವಾಗಿರುವುದೆಂಬುದನ್ನು ನಿಶ್ಚಯಪಡಿಸಿ ಕೊಡಲು ಸಿದ್ಧರಿರುವೆವೆಂದೂ ಆದಕೆ ಕರಪಾತ್ರಜೀಯವರ ಮೇಲೂ ಮತ್ತಿತರರ ಮೇಲೂ ತೀವ್ರ ಲಾಠಿಚಾರ್ಜ್ ಮಾಡಲಾಯಿತೆಂದೂ, ಹೃದಯಂಗಮವಾದ ಸ್ಫೂರ್ತಿದಾಯಕವಾದ ತಮ್ಮ ಭಾಷಣದಲ್ಲಿ ವಿವರಿಸಿದರು. ಹಿಂದೂಕೋಡು ಮಸೂದೆಯ ಮೇಲೆ ಪ್ರತಿಭಟನೆ ವ್ಯಕ್ತಪಡಿಸಲು ಸಾರ್ವಜನಿಕರು ರಾಮರಾಜ್ಯ ಪರಿಷತ್ತಿಗೆ ಸೇರಿ ರಾಮರಾಜ್ಯಪರಿಷತ್ತಿಗೆ ಮಹಾ ಚುನಾವಣೆಯಲ್ಲಿ ಓಟು ಕೊಡಬೇಕೆಂದು ತಿಳಿಸಿದರು. ಕರಪಾತ್ರಿ ಮಹಾರಾಜಕಿ ಜೈ ಜಯಘೋಷಣೆಯೊಡನೆ ಸ್ವಾಮೀಜಿಯವರು ಈ ದಿನ ಬೆಳಿಗ್ಗೆ ಡಾಕೋರಿನಿಂದ ತೆರಳಿದರು. ಮಹೋತ್ಸವವೂ ಮಹಾರುದ್ರ ಯಜ್ಞವೂ ಏಳು ದಿನಗಳು ನಡೆಯುವುವು ತಾ॥ 10 ನೆಯ್ತು 11 ರಲ್ಲಿ ಧರ್ಮ ಸಮ್ಮೇಳನವೂ ಸೇರುವುದು.

ಡಾಕೋರ್ ಅ 9— ಡಾಕೋರಿನಲ್ಲಿ ಚಂದ್ರಮೌಳೀಶ್ವರ ಮಹೋತ್ಸವ ಸಂಬಂಧದಲ್ಲಿ 2 ನೇ ದಿನದ ಕಾರ್ಯಕಲಾಪ ಹೇರಳವಾಗಿದ್ದವು. ಬೆಳಿಗ್ಗೆ ಶ್ರೀ ಕರಪಾತ್ರಜಿಸ್ವಾಮಿಗಳ ಸಾರ್ವಜನಿಕ ಬೀಳ್ಕೊಡುವಿಕೆ ಏರ್ಪಾಡಾಗಿತ್ತು; ಮಧ್ಯಾಹ್ನ ಸಮಾರಂಭಗಳಲ್ಲಿ ಭಾಗವಹಿಸಲು ಮತ್ತು ಯಜ್ಞ ದರ್ಶನಕ್ಕಾಗಿ ಸಂಸ್ಥಳಗಳಿಂದ ಒಹು ಜನ ಆಗಮಿಸಿದ್ದರು ಸಂಜೆ ಭಾರಿ ಸಭೆ ನಡೆಸಲ್ಪಟ್ಟು, ಅಹಮದಾಬಾದಿನ ನರ್ಮದ ಶಂಕರರು ತಮ್ಮ ಅನೂದದಾಯಕ ಶೈಲಿಯಲ್ಲಿ ಭವ್ಯರಸಭರಿತವಾದ ತಮ್ಮ ಕವಿತೆ ಭಾಷಣಗಳಿಂದ ಸಭಿಕರನ್ನು ಆನಂದಿಸಿದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು, ಸಭಿಕರನ್ನು ಕುರಿತು, ಏನೇ ಆದರೂ ಧರ್ಮವನ್ನು ಆಚರಿಸಬೇಕೆಂದೂ, ಮತ್ತು ಧರ್ಮವಿದ್ದೆಡೆ ವಿಜಯ ತುಂಡಿತವೆಂದೂ, ಧರ್ಮಾಚರಣೆಯಿಂದ ಲೋಕೋತ್ತರ ಕಾರ್ಯ ಸಾಧಿಸಬಹುದೆಂದೂ ತಿಳಿಸಿ ಜನರು ರಾಮರಾಜ್ಯ ಪರಿಷತ್ತಿಗೆ ಸೇರಿ ಆದರ ಉಮೇದುವಾರರಿಗೇ ಓಟು ಕೊಡಬೇಕೆಂದರು.

ಡಾಕೋರ್, ಅ 11— ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ 3 ನೆ ದಿವಸದ ಕಾರ್ಯಕಲಾಪ ಮೊನ್ನೆ ಡಾಕೋರು ನಾಗರೀಕರಿಂದ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಹೊರದೇಶದ ಜನರು ಶ್ರೀ ಮಹಾರುದ್ರ, ಶಕ್ತಿಮಾತ ಮತ್ತು ಜಗದ್ಗುರುಗಳವರ ದರ್ಶನ ಪಡೆದರು. ಸಾಯಂಕಾಲ ನಡೆದ ಭಾರಿ ಸಭೆಯಲ್ಲಿ ವಕೀಲ್ ದೀನನಾಥ್ ಮತ್ತಿತರರು ಭಾಷಣ ಮಾಡಿದರು ಜನರು ಶಕ್ತಿ ಮಾತೆಯನ್ನು ಪೂಜಿಸಬೇಕೆಂದೂ, ರಾಮರಾಜ್ಯಕ್ಕೆ ಬೆಂಬಲವೀಯಬೇಕೆಂದೂ ಜಗದ್ಗುರುಗಳವರು ಮಾಡಿದ ಅಮೋಘ ಭಾಷಣದಲ್ಲಿ ತಿಳಿಸಿದರು.

ಮಹೋತ್ಸವದ ಕಾರ್ಯಕಲಾಪಗಳ 4 ನೇ ದಿವಸವಾದ ನಿನ್ನೆ ಅಂದವಾಗಿ ಶೃಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಶ್ರೀ ಚಂದ್ರಮೌಳೀಶ್ವರ ಮಹಾದೇವರ ಉತ್ಸವವು ರಾಜಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಜೊತೆಯಲ್ಲಿ ಚಪ್ಪಾಳೆ ಭಜನೆಯವರೂ, ಸನ್ಯಾಸಿಗಳೂ ಮತ್ತಿತರರೂ ನೆರೆದಿದ್ದರು ಮತ್ತೊಂದು ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳು ಆಸನಾರೂಢರಾಗಿದ್ದರು. ರಸ್ತೆಗಳಲ್ಲಿ, ಮನೆಯ ಕಿಟಕಿಗಳಲ್ಲಿ, ಬಿಸಿಲು ಮಚ್ಚುಗಳ ಮೇಲೆ ಜನರು ಕಿಕ್ಕಿರಿದು ಸೇರಿದ್ದು. ದರ್ಶನಲಾಭ ಪಡೆದು ಅತ್ಯಾನಂದಭರಿತರಾದರು

ನಾಲ್ಕು ಗಂಟೆಗಳ ಕಾಲ ನಡೆದ ಈ ವೈಭವ ಉತ್ಸವದಲ್ಲಿ ದಾರಿಯುದ್ದಕ್ಕೂ ಪೂಜೆಗಳು, ಮಂಗಳಾರತಿಗಳು ನಡೆದು ಕಾಣಿಕೆಗಳು ಅರ್ಪಿಸಲಾಗುತ್ತಿದ್ದಿತು

ಸಾಯಂಕಾಲ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧರ್ಮಸಮ್ಮೇಳನವು ನಡೆದು ಸಹಸ್ರಾರು ಜನರು ಭಾಗವಹಿಸಿದ್ದರು, ವಿದ್ವಾಂಸರಾದ ಮಹಾ ಪಂಡಿತರ ಭಾಷಣಗಳು ನಡೆದವು, ಅನೇಕ ವಿನೋದಾವಳಿಗಳೂ ಇದ್ದುವು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು ಭಾಷಣಗಳ ಸಾರಾಂಶ ತಿಳಿಸಿ ಧರ್ಮಶಾಸ್ತ್ರಗಳ ಅಧಾರವಿತ್ತು, ಜನರು ಧರ್ಮಮಾರ್ಗವನ್ನನುಸರಿಸಬೇಕೆಂದೂ ತಿಳಿಸಿದರು. ರಾತ್ರೆ ಭಜನೆ ನಡೆಯಿತು. ಮಹಾರುದ್ರ ಪೂರ್ಣಾಹುತಿಯು ಇಂದು ನಡೆಯಿತು. ಸಮ್ಮೇಳನವು ನಡೆಯುವುದು.

ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ ಪರಿಸಮಾಪ್ತಿ

ಡಾಕೋರು, ಅ 12— ನಿನ್ನೆ ದಿವಸ ಮಹಾರುದ್ರ ಯಜ್ಞದ ಪೂರ್ಣಾಹುತಿ ನಡೆದು, ಶ್ರೀ ಚಂದ್ರಮೌಳೀಶ್ವರ ಮಹೋತ್ಸವವು ಪರಿಸಮಾಪ್ತಿಗೊಂಡಿತು. ಪಶ್ಚಿಮ ಭಾರತದ ಅನೇಕ ಕಡೆಗಳಿಂದ ದರ್ಶನಕ್ಕಾಗಿ ಜನರು ಸಾವಿರಗಟ್ಟಲೆ ಸೇರಿದ್ದರು. ಸಾಯಂಕಾಲ ಪೂರ್ಣಾಹುತಿ ಮುಗಿದನಂತರ, ಧರ್ಮ ಸಂವೇದನವು ಜರುಗಿತು; ದೊಡ್ಡದೊಡ್ಡವರಿಂದ ಬಂದಿದ್ದ ನೂರಾರು ಸಂದೇಶಗಳು ಓದಲಾಯಿತು: ಪಶ್ಚಿಮ ಭಾರತ ಮತ್ತು ಡಾಕೋರಿನ ನಾಗರೀಕರ ಪರವಾಗಿ ಶ್ರೀ ಟಿ. ತಾಂಬೇಕರರಿಂದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರಿಗೆ ಸನ್ಮಾನಪತ್ರ ಅರ್ಪಿಸಲಾಯಿತು; ಹೊರಊರಿನ ಪ್ರಮುಖ ವಿದ್ವಾಂಸರುಗಳು ಸ್ವಾಮಿ ಅಭಯಮುತುಷ್ ರಾಂಜೀ, ಪ್ರೊ॥ ದುರ್ಕಾಲ್, ಜೋಷಿ ಗಿರಿಜಾ ಶಂಕರ್, ಕವಿ ನರ್ಮದಾಶಂಕರ್, ಶಾಸ್ತ್ರಿ ಚಂದ್ರಶೇಖರ್, ಈರಾಲ್ ಠಾಕೂರು ಸಾಹೇಬ್ ಮತ್ತು ಅನೇಕಾನೇಕರು ಭಾಷಣಮಾಡಿದರು ಶ್ರೀಯುತ ಗುಣವಂತ ಲಾಲ್ ಅವರು ತಮ್ಮ ಹಾವಭಾವಗಳಿಂದಲೂ ವಿನೋದಪೂರ್ಣ ಭಾಷಣದಿಂದಲೂ ಸಭಿಕರನ್ನು ಆನಂದಗೊಳಿಸಿದರು. ಶ್ರೀ ಮಂಜುಲಾಲ್ ದಾವೆಯವರ ನಿಸ್ವಾರ್ಥ ಸೇವೆಯ ಬಗ್ಗೆ ಶ್ರೀ ಜಗದ್ಗುರುಗಳವರು ಉನ್ನತ ಮಾತುಗಳನ್ನಾಡಿ ಅವರಿಗೆ ನ್ಯಾಯವಿದ್ವತ್ ಭಾಸ್ಕರ ಎಂಬ ಪ್ರಶಸ್ತಿಯನ್ನು ಸ್ವರ್ಣಪದಕದೊಡನೆ ಅನುಗ್ರಹಿಸಿದರು. ಪ್ರೊ॥ ದುರ್ಕಾಲ್, ಶಾಸ್ತ್ರಿ ಅನುರೂಪ್‌ರಾಂಜೀ, ಈರಾಲ್ ಠಾಕೂರ್ ಸಾಹೇಬ್, ಶ್ರೀ ತಂಬೇಕರ್ ರಾಂಲಾಲ್ ವಕೀಲ್, ಶಾಸ್ತ್ರಿ ಚಂದ್ರಶೇಖರ್, ಮತ್ತಿತರ ಅನೇಕರಿಗೆ ವಿವಿಧ ಬಿರುದುಗಳು ಕೊಡಲಾಯಿತು. ಶ್ರೀ ಶಂಕರ ಭಾಗತರು ಸಭಿಕರನ್ನು ಮನೋರಂಜಕ ಮತ್ತು ಬೋಧಪ್ರದ ಭಜನೆಯಿಂದ ಸಂತೋಷಗೊಳಿಸಿದರು. ಶ್ರೀ ಚಂದ್ರಮೌಳೀಶ್ವರರ ಆಶ್ರಯದಲ್ಲಿ ಜನರೆಲ್ಲರೂ ಸಂಘಟಿತರಾಗಬೇಕೆಂದೂ ಮತ್ತು ರಾಮರಾಜ್ಯದ ಮೂಲಕ ಭಾರತೀಯ ಸಂಸ್ಕೃತಿಯನ್ನು ಕಾಪಾಡಲು ಸಂಪೂರ್ಣ ಪ್ರಯತ್ನ ಮಾಡಬೇಕೆಂದೂ; ಜಗದ್ಗುರುಗಳವರು ತಿಳಿಸಿ ಆಶೀರ್ವದಿಸಿದರು. ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದ ವೈಭವ ಅಭಿವೃತಸ್ನಾನ ಮೆರವಣಿಗೆಯೊಂದಿಗೆ ಮಹೋತ್ಸವವು ಪರಿಸಮಾಪ್ತಿಗೊಂಡಿತು